ಇಂದು ದಿ**: 06.04.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀ ಸವಾಲು ವಾದಿಗಳ ಪರಃಶ್ರಿ ಎಂ ಎಸ್ ಎಸ್ **.,** ವಕೀಲರಿಂದ**.**

ನಾನು ಬಿ ಬಿ ಎಂ ಓದಿರುತ್ತೇನೆ. ನಾನು ಪಿಯುಸಿಯನ್ನು ಹೊಸದುರ್ಗದಲ್ಲಿ ಓದಿರುತ್ತೇನೆ. ಡಿ ಡಬ್ಲ್ಯೂ 4 ಮತ್ತು ನಾನು ಪ್ರೌಢಶಾಲೆ ಹಾಗೂ ಪಿಯುಸಿಯನ್ನು ಒಂದೇ ಕಾಲೇಜಿನಲ್ಲಿ ಓದಿರುತ್ತೇವೆ. ಆಗಿನಿಂದಲೂ ನಾವಿಬ್ಬರು ವಿಶ್ವಾಸದಿಂದ ಇರುತ್ತೇವೆ ಎನ್ನುವುದು ನಿಜ. ನಾವು 3 ಜನ ಅಣ್ಣತಮ್ಮಂದಿರು. ನಾನು ಹಿರಿಯ ಮಗ. ಮೂಡಲ್ಲಗಿರಿಯಪ್ಪ ಎರಡನೇ ಮಗ. ಮೂರನೆಯ ಮಗ ಎಸ್ ಕುಮಾರ. ಎಸ್ ಕುಮಾರ ಶಿಕ್ಷಕನಾಗಿ ಕೆಲಸ ಮಾಡುತ್ತಾನೆ. ಸದರಿ ಎಸ್ ಕುಮಾರ ಇವನ ಶಾಲಾ ದಾಖಲಾತಿಯಲ್ಲಿ ಕುಮಾರ ಬಿನ್ ಶಿವಣ್ಣ ಎಂದು ಹೆಸರು ಇರುತ್ತದೆ. ನೌಕರಿಗೆ ಹೋದಾಗ ಅವನಿಗೆ ಸಂಬಂಧಪಟ್ಟ ದಾಖಲಾತಿಗಳಲ್ಲಿ ಕುಮಾರ ಬಿನ್ ಶಿವಣ್ಣ ಎಂದು ದಾಖಲು ಆಗಿರುತ್ತದೆ. ಶಿವಣ್ಣ ಇವರಿಗೆ ಹೊಟ್ಟೆಪ್ಪರ ಶಿವಣ್ಣ ಎಂದು ಮನೆತನದ ಹೆಸರು ಇರುತ್ತದೆ ಎನ್ನುವುದು ನಿಜ. ದಿಃ 30.12.1974 ರ ದಾಖಲೆಯಲ್ಲಿ ನಮ್ಮ ತಂದೆಯ ಸಹಿ ಇದೆ ಅದನ್ನು ನೋಡಿ ಗುರುತಿಸು ಎಂದು ನನಗೆ ಡಿ. ಡಬ್ಲ್ಯೂ 4 ತಿಳಿಸಿರುತ್ತಾನೆ. ಸದರಿ ಮಾಹಿತಿಯನ್ನು ನನಗೆ ಕೊಟ್ಟು 1 ತಿಂಗಳು ಆಗಿರುತ್ತದೆ. ಅದರ ಮೊದಲು ಸದರಿ ಮಾಹಿತಿ ನನಗೆ ಇರಲಿಲ್ಲ. ನಮ್ಮ ತಂದೆಯವರು ಪೂಜಾರಿ ತಿಮ್ಮಣ್ಣನ ಮಗ ಹನುಮಂತಪ್ಪ ಎಂದು ಸಹಿ ಮಾಡಿರುವ ಬೇರೆ ದಾಖಲೆಗಳು ಇರುವುದಿಲ್ಲ. ನಮ್ಮ ತಂದೆಯವರು ಟಿ.ಹನುಮಂತಪ್ಪ ಎಂದು ಸಹಿ ಮಾಡುತ್ತಿದ್ದರು ಎನ್ನುವುದು ನಿಜ. ನಿಡಿಃ 01 ರಲ್ಲಿ ಟಿ ಹನುಮಂತಪ್ಪ ಎಂದು ಸಹಿ ಇಲ್ಲ ಎನ್ನುವುದು ನಿಜ. ನಮ್ಮ ಚಿಕ್ಕಪ್ಪ ರಾಮಪ್ಪ ನನ್ನ ಹಾಗೂ ನನ್ನ ಸಹೋದರರ ವಿರುದ್ಧ ಕೇಸನ್ನು ನಡೆಸಿರುತ್ತಾರೆ ಎನ್ನುವುದು ನಿಜ. ನಮ್ಮ ಪರವಾಗಿ ಸದರಿ ಕೇಸಿನಲ್ಲಿ ನನ್ನ ಸಹೋದರ ಮೂಡಲಗಿರಿಯಪ್ಪ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದ ಎನ್ನುವುದು ನಿಜ. ಕೇಸು ನಡೆಸುವ ಕುರಿತು ಹೆಚ್ಚಿನ ಮಾಹಿತಿ ನನಗಿಂತಲೂ ಮೂಡಲಗಿರಿಯಪ್ಪನಿಗೆ ಇರುತ್ತದೆ ಎನ್ನುವುದು ನಿಜ. ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸುವ ಪ್ರತಿಯೊಂದು ಕೆಲಸವನ್ನು ಮೂಡಲಗಿರಿಯಪ್ಪ ಮಾಡಿರುತ್ತಾನೆ ಎನ್ನುವುದು ನಿಜ. ನಾನು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎನ್ನುವುದು ನಿಜ. ನಾನು ಮೊದಲ ಬಾರಿ ನ್ಯಾಯಾಲಯಕ್ಕೆ ಈ ಕೇಸಿನಲ್ಲಿ ಹಾಜರಾಗಿರುತ್ತೇನೆ. ಸಾಕ್ಷಿಯಾಗಿ ಸಹಿ ಮಾಡುವಾಗ ಅವರ ಸಹಿ, ತಂದೆಯ ಹೆಸರು ಮತ್ತು ಊರ ಹೆಸರನ್ನು ಬರೆಯುತ್ತಾರೆ ಎನ್ನುವುದು ನಿಜ. ನಿಡಿಃ 1 ರಲ್ಲಿ ಊರು ಹೆಸರು ಇಲ್ಲ ಎನ್ನುವುದು ನಿಜ. ಹೊಸದುರ್ಗದಲ್ಲಿ ನಾನು ವಾಸವಾಗಿರುತ್ತೇನೆ ಎನ್ನುವುದು ನಿಜ. ಡಿ ಡಬ್ಲ್ಯೂ 4 ಇವರ ವಾಸದ ಮನೆ ಹೊಸದುರ್ಗದಲ್ಲಿ ಇರುತ್ತದೆ. ನಮ್ಮ ಮನೆ ಮತ್ತು ಡಿ ಡಬ್ಲ್ಯೂ 4 ರವರ ಮನೆ ಅಕ್ಕಪಕ್ಕದಲ್ಲಿರುತ್ತವೆ ಎಂದರೆ ಸರಿಯಲ್ಲ. ನಮ್ಮ ತಂದೆ ಶಿವಣ್ಣ ಎಂದು ಸಹಿ ಮಾಡುತ್ತಿದ್ದ ಎಂದರೆ ಸರಿಯಲ್ಲ. ಎಸ್ ಕುಮಾರ ಇವನ ಶಾಲಾ ದಾಖಲಾತಿಗಳಲ್ಲಿ ನಮ್ಮ ತಂದೆ ಶಿವಣ್ಣ ಎಂದು ಸಹಿ ಮಾಡಿರುತ್ತಾನೆ ಎನ್ನುವುದು ಗೊತ್ತಿರುವುದಿಲ್ಲ. ನಿಡಿಃ 1 ರಲ್ಲಿ ನಮ್ಮ ತಂದೆಯ

ಸಹಿ ಇಲ್ಲ ಎಂದರೆ ಸರಿಯಲ್ಲ. ಪೂಜಾರಿ ತಿಮ್ಮಪ್ಪನ ಮಗ ಹನುಮಂತಪ್ಪ ಎಂದು ಯಾವ ದಾಖಲಾತಿಗಳಲ್ಲಿಯೂ ನಮ್ಮ ತಂದೆಯವರು ಸಹಿ ಮಾಡಿಲ್ಲ ಎನ್ನುವುದು ನಿಜ. ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಡಿ ಡಬ್ಲ್ಯೂ 4 ರವರ ವಿಶ್ವಾಸಕ್ಕೆ ಕಟ್ಟು ಬಿದ್ದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.